ಅಂತ ಈ ಊರಿಗೆ ಬಂದವನು... ಹಂಗೆ ನೋಡಿದರೆ ನೀನು ಈ ಊರವನೇ ಅಲ್ಲ... ನನ್ನ ಪಂಚಾಯ್ತಿಗೆ ಬಾ ಅಂತ ಕರೆಯೋವಷ್ಟು ಸೊಕ್ಕು ಬಂತೇನಲೇ ನಿಂಗೆ? ನನ್ನನ್ನ ಯಾರಂತ ತಿಳಕಂಡಿದ್ದೀಯಾ. ನಾನು ಊರಿನ ಪಂಚಾಯ್ತಿಗೆ ಚೇರ್ಮನ್ನು. ಗ್ರಾಮದ ಪ್ರಥಮ ಪ್ರಜೆ. ಈ ಊರಲ್ಲಿ ಪಂಚಾಯ್ತಿ ಕರೆಯೋ ಅಧಿಕಾರ ಇರೋದು ನಂಗೆ ಮಾತ್ರ. ಪಂಚಾಯ್ತಿ ಕರೆಯೋಕೆ ಆ ದಾಸಯ್ಯ ಯಾರು?' ಅಂತ ಜೋರು ಧ್ವನಿಯಲ್ಲಿ ಕೂಗಾಡಿದರು...

ಅಕ್ಕ ಪಕ್ಕದ ಮನೆಗಳ ಅಂಗಳದಲ್ಲಿ, ಜಗುಲಿಗಳ ಮೇಲೆ ಮಲಗಿದ್ದವರು ಎದ್ದು ಬಂದು ಚೇರ್ಮನ್ನರ ಮನೆಯ ಮುಂದೆ ನಿಂತು ಅವರ ರೌದ್ರಾವತಾರದ ಪ್ರಹಸನ ನೋಡುತ್ತ ನಿಂತುಬಿಟ್ಟರು! ಅವರಿಗೆ ವಿಷಯ ಏನು ಎನ್ನುವುದು ಅರ್ಥವಾಗಲಿಲ್ಲ. ಹನುಮಂತರಾಯ ಇಷ್ಟೊತ್ತಿನಲ್ಲಿ ಯಾಕೆ ಬಂದಿದ್ದಾನೆ ಅನ್ನೋದು ತಿಳಿಯದೆ ಜನ ಮಿಕಿ ಮಿಕಿ ನೋಡತೊಡಗಿದರು... 'ನೋಡಯ್ಯ, ಹನುಮಂತರಾಯ ಹೋಗಿ ನಿನ್ನ ದಾಸಣ್ಣ ಮಾಮನಿಗೆ ಹೇಳು... ಕೆರೆಗೆ ಬಿದ್ದು ಸತ್ತಿರೋ ಹೆಂಗಸು ಮಾಜಿ ಚೇರ್ಮನ್ನರು ಇಟ್ಕಂಡಿದ್ದ ಹೆಂಗಸು ಅಂತ ಗೊತ್ತಾಗಿದೆ. ಬೆಳಿಗ್ಗೆ ನಾನೇ ಪೊಲೀಸರಿಗೆ ಕಂಪ್ಲೇಂಟ್ ಕೊಡ್ತೀನಿ. ನಿಮ್ಮ ಕಂತ್ರಿ ಆಟಗಳು ನನ್ನತ್ರ ನಡೆಯಲ್ಲ. ಮುಚ್ಚಕಂಡ್ ಎದ್ದು ಹೋದ್ರೆ ಸರಿ, ಇಲ್ಲಾ ಅಂದ್ರೆ ನಿನ್ನ ಕಚ್ಚೆ ಕಿತ್ತು ಈ ಊರಿಂದಾನೆ ಓಡಿಸ್ತೀನಿ...' ಅಂತ ಖಡಕ್ಕಾಗಿ ಹೇಳಿದರು. ಚೇರ್ಮನ್ನರ ಸಿಟ್ಟಿನ ಮುಖ ನೋಡಿ ಹನುಮಂತರಾಯ ತತ್ತರಿಸಿ ಹೋದ. ಮೂರ್ನಾಲ್ಕು ನಿಮಿಷ ಸುಮ್ಮನೆ ಕೂತಿದ್ದು ನಂತರ ಎದ್ದು ಅಲ್ಲಿಂದ ಹೊರಟೇ ಹೋದ. ಹೋದವನು ಯಾರಿಗೂ ಹೇಳದೆ ತನ್ನ ಮನೆಯ ಮಾಳಿಗೆ ಹತ್ತಿ ಮಲಗಿಬಿಟ್ಟ.

## 3

ಮೊದಲನೆ ಜಾವದ ಕೋಳಿ ಕೂಗಿದರೂ ಊರು ಮಲಗಲಿಲ್ಲ. ಯಾರು ಸತ್ತರೆ ನಮಗೇನು ಎನ್ನುವ ಧೋರಣೆ ಬೆಳೆಸಿಕೊಂಡವರಿಗೂ ನಿದ್ದೆ ಹತ್ತಲಿಲ್ಲ. ಮಾಜಿ ಚೇರ್ಮನ್ನರ ಬೆಂಬಲಿಗರು ದಾಸಣ್ಣನ ಮನೆಯ ಅಂಗಳದಲ್ಲಿ, ಚೇರ್ಮನ್ನರ ಪರಿವಾರದವರು ಅವರ ಮನೆಯ ಪಡಸಾಲೆಯಲ್ಲಿ ಸೇರಿದರು. ಇನ್ನು ಕೆಲವರು ಅಲ್ಲಲ್ಲಿ ಸಣ್ಣಪುಟ್ಟ ಗುಂಪು ಕಟ್ಟಿಕೊಂಡು ಮಾತಾಡಿದರು. ಎಲ್ಲರದೂ ಒಂದೇ ಪ್ರಶ್ನೆ. ಮುಂದೇನು ಎಂಬುದು. ಮೂರ್ನಾಲ್ಕು ಸಲ ಟೀ ಕುಡಿದರು. ಬೀಡಿ ಸೇದಿದರು. ಪದೇ ಪದೇ ಎಲೆಗಳಿಗೆ ಸುಣ್ಣ ಸವರಿ ಅಗಿದು ಉಗುಳಿದರು. ಆದರೂ ಮುಂದೇನು ಮಾಡಬೇಕು ಎಂಬ ಸ್ಪಷ್ಟ ನಿರ್ಧಾರಕ್ಕೆ ಬರದೆ ಒದ್ದಾಡಿಹೋದರು. ಕೆರೆಗೆ ಬಿದ್ದಿರೊ ಹೆಂಗಸು, ಮಗು ಯಾರೆಂಬುದರ ಸಣ್ಣ ಸುಳಿವೂ ಸಿಕ್ಕಲಿಲ್ಲ.

'ಮಾಯಾಬ್ರಹ್ಮಾಚಾರ್ ಸೊಸೆ ಸುಮಂಗಳಕ್ಕ, ತನ್ನ ಅತ್ತೆಯ ಜತೆ ಜಗಳ ಮಾಡಿಕೊಂಡು ನಿನ್ನೆ ಮಧ್ಯಾಹ್ನ ಗೊಲ್ಲಳ್ಳಿ ತೋಪಿನ ಕಡೆಗೆ ಹೋಗುತ್ತಿದುದನ್ನು ನೋಡಿದೆ' ಅಂತ ಯಾರೊ ಹೇಳಿದರು. ಅದು ಗುಲ್ಲಾಯಿತು. 'ಅವಳೇ ಕೆರೆಗೆ ಬಿದ್ದಿರಬಹುದೇ?... ಛೆ ಛೇ, ಸುಮ್ಮನೆ ಸುಳ್ಳು ಹಬ್ಬಿಸೋದು ಬೇಡ. ಕೆರೆಗೆ ಬಿದ್ದಿರೊ ಹೆಂಗಸು ದೊಡ್ಡ ಗಾತ್ರದವಳಂತೆ ಅಂತ ನೋಡಿ ಬಂದವರೇ ಹೇಳಿದರಲ್ಲ. ಸುಮಂಗಳಕ್ಕ ತೆಳ್ಳನೆಯ ಗಿಡ್ಡ ಹೆಂಗಸು. ಆಯಮ್ಮ ಕೆರೆಗೆ ಬಿದ್ದು ಪ್ರಾಣ ಕಳಕೊಳ್ಳುವಂತ ಹೇಡಿಯಲ್ಲ' ಅಂತ ಇನ್ನು ಕೆಲವರು ಮಾತಿನಲ್ಲೇ ಸರ್ಟಿಫಿಕೇಟ್ ಕೊಟ್ಟರು.

ಸುಮಂಗಳಕ್ಕ, ಮನೆಯ ಅಂಗಳದಲ್ಲಿ ಜಗಳಕ್ಕೆ ನಿಂತಳೆಂದರೆ ಅವಳ ಗಂಡ ನೀಲಕಂಠಾಚಾರಿ, ಅತ್ತೆ, ನಾದಿನಿಯರು ಮನೆಯಿಂದ ಹೊರಕ್ಕೇ ಬರುತ್ತಿರಲಿಲ್ಲ. ಅವಳ ಜಗಳ ಕೆಲವೇ ನಿಮಿಷ. ಹೋ ಅಂತ ಊರಿಗೆಲ್ಲ ಕೇಳಿಸುವಂತೆ ದೊಡ್ಡ ಸ್ವರದಲ್ಲಿ ಕೂಗಾಡಿ, ಸುಮ್ಮನಾಗಿ ಬಿಡುತ್ತಿದ್ದಳೆನ್ನುವುದು ಇಡೀ ಊರಿಗೆ ಗೊತ್ತು. ಅವಳು ಕೆರೆಗೆ ಬಿದ್ದು ಸಾಯ್ತಾಳೆ ಅಂದ್ರೆ ಯಾರೂ ನಂಬಲ್ಲ ಅಂತ ಅನೇಕರು ಹೇಳಿದರು. ಅವಳು ಹೋದದ್ದು ನೈರುತ್ಯ ದಿಕ್ಕಿಗೆ ಇರೋ ತೋಪಿನ ಕಡೆಗೆ. ಕೆರೆ ಇರೋದು ದಕ್ಷಿಣಕ್ಕೆ.